4–5 ಈ ತರಹದ ಅಸೋಸಿಯೇಷನ್ಸ್ ಇವೆ. ಮತ್ತು ಕಿರುಚಿತ್ರಗಳನ್ನು ಮಾಡುವವರ ಒಂದು ಅಸೋಸಿಯೇಷನ್ ಇದೆ. ದೊಡ್ಡ ಚಿತ್ರಗಳನ್ನು ತಯಾರು ಮಾಡುವವರ ಒಂದು ಅಸೋಸಿಯೇಷನ್ ಇದೆ. ಈ ರೀತಿ ಎಲ್ಲಾ ಇವೆ, ನಾನು ಆಯವ್ಯಯದಲ್ಲಿ ಈ ನಾನ್ ಕನ್ನಡ ಚಲನಚಿತ್ರಗಳಿಗೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ 70 ಪರ್ಸೆಂಟ್ ಹಿಂದೆ ಇದ್ದುದನ್ನು 40 ಪರ್ಸೆಂಟಿಗೆ ಇಳಿಸಿದ್ದೇನೆ ಎಗ್ಸಿಬ್ಯುಟರ್ಸ್ ಬಹಳ ದಿನಗಳಿಂದ ನಮಗೆ 70 ಪರ್ಸೆಂಟ್ ಬಹಳ ಜಾಸ್ತಿ ನಮಗೆ ಕಷ್ಟವಾಗುತ್ತದೆ ನಾವು ಕೊಡುವುದಕ್ಕಾಗುವುದಿಲ್ಲ ಎಂದು ಒಂದು ಮನವಿಯನ್ನು ಪದೇ ಪದೇ ಮಾಡುತ್ತಿದ್ದರು. ಎರಡನೆಯದು ಕೆಲವು ಕಡೆಗಳಲ್ಲಿ ಚಿತ್ರಮಂದಿರಗಳ ಮುಂದೆ ಕನ್ನಡ ಚಲನಚಿತ್ರಗಳ ಬೋರ್ಡ್ ಹಾಕುವುದು; ಮತ್ತು ಅಲ್ಲಿ ಬೇರೆ ಭಾಷೆಯ ಚಲನಚಿತ್ರಗಳನ್ನು ನಡೆಸುವುದು. ಹೀಗಾಗಿ ನಮಗೆ ತೆರಿಗೆ ಬರುತ್ತಿರಲಿಲ್ಲ, ಏಕೆಂದರೆ ಕನ್ನಡ ಸಿನಿಮಾಗಳಿಗೆ ಪೂರ್ತಿ ತೆರಿಗೆ ವಿನಾಯಿತಿ ಇದೆ, ಅದಕ್ಕೆ ತೆರಿಗೆ ಒಂದು ಪೈಸೆ ಕೊಡುವಂತಿಲ್ಲ. ತಮಿಳು ಚಿತ್ರವಿರಬಹುದು ಮಲೆಯಾಳಂ ಚಿತ್ರವಿರಬಹುದು, ತೆಲುಗು ಚಿತ್ರವಿರಬಹುದು, ಹಿಂದಿ ಚಿತ್ರವಿರಬಹುದು ಮರಾಠಿ ಚಿತ್ರಇರಬಹುದು. ತುಳು, ಕೊಡುಗು ಇತ್ಯಾದಿ ಭಾಷೆಗಳ ಚಿತ್ರಗಳಿಗೂ ಕೂಡ, ಕನ್ನಡ ಜೊತೆಗೆ ತೆರಿಗೆ ವಿನಾಯಿತಿ ಇದೆ. ಅದಕ್ಕೆ 70 ರಿಂದ 40ಕ್ಕೆ ಇಳಿದಿದೆ. ಬೇರೆ ರಾಜ್ಯಗಳಲ್ಲಿ ಆಯಾ ರಾಜ್ಯಗಳ ಭಾಷೆಗಳನ್ನು ಬಿಟ್ಟು ಬೇರೆ ಭಾಷೆಗಳ ಚಿತ್ರಗಳಿಗೆ ಅಲ್ಲಿ 25 ಪರ್ಸೆಂಟ್ ತರಿಗೆಗಳಿಗೆ. ತಮಿಳುನಾಡು ಇತ್ಯಾದಿ ಕಡೆಗಳಲ್ಲಿ ಕನ್ನಡ ಚಲನಚಿತ್ರಗಳು ಹೆಚ್ಚು ಪ್ರದರ್ಶನಗಳಾಗುವುದಿಲ್ಲವೆನ್ನುವ ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ, ಅದೇ ರೀತಿ ಆಂಧ್ರದಲ್ಲಿ ಹೆಚ್ಚು ಪ್ರದರ್ಶನವಾಗುವುದಿಲ್ಲ, ಕೇರಳದಲ್ಲಿ ಹೆಚ್ಚು ಪ್ರದರ್ಶನವಾಗುವುದಿಲ್ಲ, ಈ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆಂದು ಮೇಲ್ಮನೆಯಲ್ಲಿ ಒಪ್ಪಿಕೊಂಡಿದ್ದೇವೆ, ನನ್ನ ಪರವಾಗಿ ಜಲಸಂಪನ್ಮೂಲ ಸಚಿವರು ಅಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ, ನಾನು ಕೂಡ ಅದನ್ನು ಒಪ್ಪಿಕೊಂಡಿದ್ದೇನೆ. ಅದಕ್ಕೊಂದು ಸಮಿತಿ ಮಾಡುತ್ತೇವೆ, ಕನ್ನಡ ಚಲನಚಿತ್ರೋದ್ಯಮ ಬೆಳೆಯಬೇಕಾದರೆ, ಬೇರೆ ಚಿತ್ರಗಳ ಬಗ್ಗೆಯ ಗಮನದಲ್ಲಿಟ್ಟುಕೊಂಡು ಏನು ಮಾಡಬಹುದೆಂಬುದರ ಬಗ್ಗೆ ಒಂದು ಸ್ಪಷ್ಟವಾದಂಥ ಒಂದು ವರದಿಯನ್ನು ಕೊಟ್ಟರೆ, ಅದರ ಆಧಾರದ ಮೇಲೆ ತೀರ್ಮಾನ ಮಾಡುತ್ತೇವೆ.

10. ತುಂಗಾ ಏತನೀರಾವರಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ

ಶ್ರೀ ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ) : ಮಾನ್ಯ ಸಭಾಧ್ಯಕ್ಷರೆ, ತುಂಗಾ ಏತನೀರಾವರಿ ಸೌಲಭ್ಯಕ್ಕಾಗಿ 1997ರಲ್ಲಿ ಆಡಳಿತಾತ್ಮಕ ತಾಂತ್ರಿಕ ಅನುಮೋದನೆ ದೊರೆತಿದ್ದು, 1997–98ರ ಆಯವ್ಯಯದಲ್ಲಿ ಇಪ್ಪತ್ನಾಲ್ಕು ಕೋಟಿ ಹದಿನೆಂಟು ಲಕ್ಷ ರೂಪಾಯಿಗಳನ್ನು ಒದಗಿಸುತ್ತೇವೆಂದು ಹೇಳಿದ್ದರು. ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ದಿ: ಜೆ.ಹೆಚ್. ಪಟೇಲರು, ಈ ತುಂಗಾ ಏತನೀರಾವರಿ ಯೋಜನೆಗೆ ಬಂದು ಪೂಜೆಯನ್ನು ಕೂಡ ಸಲ್ಲಿಸಿ ಅಡಿಗಲ್ಲನ್ನು ಹಾಕಿದರು, ಆದರೆ ಇದುವರೆವಿಗೂ ಏತನೀರಾವರಿ ಯೋಜನೆ ಕಾರ್ಯ ಆರಂಭವಾಗಿಲ್ಲ. ಅಂದಿನ ನೀರಾವರಿ ಸಚಿವರಾಗಿದ್ದ ದಿ: ನಾಗೇಗೌಡರನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ. ಸಣ್ಣ ನೀರಾವರಿ ಇಲಾಖೆಯಲ್ಲಿರುವ ಈ ತುಂಗಾ ಯೋಜನೆಯನ್ನು ದೊಡ್ಡ ನೀರಾವರಿ ಇಲಾಖೆಗೆ ಹಸ್ತಾಂತರಗೊಳಿಸಿ ಇದನ್ನು ಮಾಡಲೇಬೇಕೆಂದು ಎರಡು ಸಾರಿ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು. ಈ ಯೋಜನೆ ಜಾರಿಗೆ ಬಂದರೆ ಐಹೊಳೆ, ಗೌಡನಕೆರೆ, ಬಾರೆಹಳ್ಳಿಗಳಲ್ಲಿ ಕೆರೆಗಳು ತುಂಬುತ್ತವೆ, 1.6 ಟಿಎಂಸಿ ನೀರನ್ನು

ಸಂಗ್ರಹ ಮಾಡಬಹುದಾಗಿರುವುದರಿಂದ, ಅಂದಿನ ಸಂದರ್ಭದಲ್ಲಿ ದಿ: ಜೆ.ಹೆಚ್. ಪಟೇಲರೂ ಕೂಡ ಹೇಳಿದ್ದರು, ಈ ಯೋಜನೆ ಬಹಳ ಮುಖ್ಯವಾಗಿದ್ದು, ಏತನೀರಾವರಿಯಿಂದ ಗೌಡನಕೆರೆಗೆ ನೀರು ಬಂದರೆ ನನ್ನ ತಾಲ್ಲೂಕಿನ ಆ ಭಾಗದ ಸವಳಂಗ ರೈತಕಾಯಕ ಹೊಸಕೆರೆಗೆ ನೀರು ಸಂಗ್ರಹವಾಗಿ ಆ ಭಾಗದ ಚೆಕ್ಕಳ್ಳಿ, ಗೊಳ್ಳಳ್ಳಿ, ಗಂಜಿನಹಳ್ಳಿ ಗ್ರಾಮಗಳ ರೈತರ ಸುಮಾರು ಹತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ. ಇದರ ಜೊತೆಗೆ ನ್ಯಾಂತಿ, ಸುರುಹೊನ್ನೆಗಳಲ್ಲಿ ಸುಮಾರು 20 ಸಾವಿರ ಜನಸಂಖ್ಯೆ ಇದೆ, ಅವರು ಕುಡಿಯುವ ನೀರಿಗಾಗಿ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ದಿ: ಜೆ.ಹೆಚ್. ಪಟೇಲರು, ಮುಖ್ಯಮಂತ್ರಿಯಾಗಿದ್ದಾಗ ತುಂಗಾ ಏತನೀರಾವರಿಗೆ ಅವರೇ ಹೋಗಿ ಶಂಕುಸ್ಥಾಪನೆ ಮಾಡಿ ಇನ್ನೇನು ಕೆಲಸ ಪ್ರಾರಂಭವಾಗುವ ಹಂತಕ್ಕೆ ಬಂತು ಇವತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ಮಳೆ ಯಾಗುತ್ತಿದ್ದರೂ ಕೂಡ, ಹೊಸನಗರದ ಕೆಲವು ಭಾಗಗಳಾದ, ಹಾರನಹಳ್ಳಿ, ಕುಂಸಿ, ಹೊನ್ನಾಳಿಗಳಲ್ಲಿ ಇವತ್ತೂ ಕೂಡ ಕುಡಿಯುವ ನೀರಿಗಾಗಿ ಹಾಹಾಕಾರವಿದೆ, ಅಂತಹದ್ದಕ್ಕೆ ಇದೊಂದು ಯೋಜನೆ ಮಂಜೂರಾಗಿದೆ, ಆದರೆ ಇದುವರೆವಿಗೂ ಯಾವ್ಯಾವುದೋ ಕಾರಣಕ್ಕೆ ಕೆಲಸ ಪ್ರಾರಂಭವಾಗಿಲ್ಲ, ದಯಮಾಡಿ ತಾವು ಇದಕ್ಕೆ ಒತ್ತುಕೊಟ್ಟು ಕೆಲಸ ಪ್ರಾರಂಭ ಮಾಡಿಸಬೇಕೆಂದು ಶಿವಮೊಗ್ಗ ಜಿಲ್ಲೆಯ ಹಿತದೃಷ್ಟಿಯಿಂದ ಆ ಕ್ಷೇತ್ರದ ಶಾಸಕರು ಕೇಳುತ್ತಿದ್ದಾರೆ, ಅದನ್ನು ಮಂಜೂರು ಮಾಡಿ ಕೆಲಸ ಪ್ರಾರಂಭ ಮಾಡಿಸಿಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಧರಮ್‌ಸಿಂಗ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು ಹೇಳಿದಂತೆ ಹಿಂದಿನ ಮುಖ್ಯಮಂತ್ರಿಗಳಾದ ದಿ: ಜೆ.ಹೆಚ್. ಪಟೇಲರ ಕಾಲದಲ್ಲಿ ಆ ತುಂಗಾ ಯೋಜನೆಗೆ ಮಂಜೂರಾತಿಯನ್ನು ಮಾಡಿದ್ದಾರೆ, ಇನ್ನು ಕೆಲಸ ಪ್ರಾರಂಭಮಾಡಿಲ್ಲವೆಂದು ಹೇಳುತ್ತಿದ್ದಾರೆ. ಆ ಭಾಗದ ಸಂಬಂಧಪಟ್ಟ ಶಾಸಕರು ಸಹ ಹೇಳಿದ್ದಾರೆ. ನಾನು ಖಗ್ರೆಯವರು ಜೊತೆಯಲ್ಲಿ ಮಾತನಾಡಿ, ಅದು ಮಂಜೂರಾತಿಯಾಗಿದ್ದರೆ, ಹಣ ಬಿಡುಗಡೆಯಾಗದೆ ಇದ್ದರೆ ಬಹಳ ತ್ವರಿತಗತಿಯಲ್ಲಿ ಅಲ್ಲಿ ಕೆಲಸ ಪ್ರಾರಂಭ ಮಾಡುಸುವ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

ಶ್ರೀ ಹೆಚ್. ಹಾಲಪ್ಪ (ಹೊಸನಗರ) : ಮಾನ್ಯ ಅಧ್ಯಕ್ಷರೆ, ಅದು ನನ್ನ ಕ್ಷೇತ್ರದ ಶಿವಮೊಗ್ಗ ರೂರಲ್‌ಗೆ ಬರುತ್ತದೆ, ಆ ಭಾಗದಲ್ಲಿ ಶರಾವತಿಯ ಮುಳುಗಡೆಯ ರೈತರು ಅಲ್ಲಿ ಜಮೀನು ಕೊಡುವ ಸಂದರ್ಭದಲ್ಲಿ ಅದನ್ನು ಮಾಡಿಕೊಡುತ್ತೇವೆಂದು ಹಿಂದೆ ಕೂಡ ಹೇಳಿದ್ದರು, ಶರಾವತಿ ಯೋಜನೆಯಿಂದ ಮುಳುಗಡೆಯಾಗಿ ನಿರಾಶ್ರಿತರಾಗಿ ಬಂದಂತಹ ರೈತರು ಅಲ್ಲಿದ್ದಾರೆ, ಇಷ್ಟೊಂದು ಮಳೆಯಾಗುತ್ತಿದ್ದರೂ ಕೂಡ ಆ ಭಾಗದಲ್ಲಿ ಮಳೆಯಾಗುತ್ತಿಲ್ಲ, ಅದನ್ನು Rain Shadow area ಅಂದರೆ ಮಳೆಯ ನೆರಳಿನ ಪ್ರದೇಶವೆಂದು ಹೇಳುತ್ತಾರೆ, ಅದುದರಿಂದ ಅದನ್ನು ಮಾಡಿಕೊಡಬೇಕು. ಅಲ್ಲೊಂದು ಸಣ್ಣ ಕಾನೂನಿನ ತೊಡಕಿದೆ, 173 ಎಕರೆ ಅರಣ್ಯ ಭೂಮಿ ಇದೆ, ಆ ಲ್ಯಾಂಡನ್ನು ರೆವಿನ್ಯೂ ಲ್ಯಾಂಡ್ ಬದಲಿ ಮಾಡಿಕೊಡಬೇಕು ಆ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡು ಆ ಅರಣ್ಯಭೂಮಿ ಏನಿದೆ ಅದಕ್ಕೆ ಬದಲಿ ರೆವಿನ್ಯೂ ಭೂಮಿಯನ್ನು ಕೊಟ್ಟು ಕೂಡಲೇ ಯೋಜನೆಯನ್ನು ಕಾರ್ಯಗತಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಈ ಏತ ನೀರಾವರಿ ಯೋಜನೆಯಿಂದ.....

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ದಯಮಾಡಿ ಕುಳಿತುಕೊಳ್ಳಿ; ಈಗ ಜೀವರಾಜ್ ಅವರು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಿ:ಜೆ.ಹೆಚ್. ಪಟೇಲರ ಕಾಲದಲ್ಲಿ ತುಂಗಾ ಏತ ನೀರಾವರಿ ಯೋಜನೆ ಮಂಜೂರಾಗಿದ್ದರೆ, ನಾನು ಹಣಕಾಸಿನ ನೆರವು ಕೊಡಿಸಿ, ನೀರಾವರಿ ಸಚಿವರೊಡನೆ ಮಾತನಾಡಿ ಕೆಲಸ ಪ್ರಾರಂಭ ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ಸಾಕು, ಮತ್ತೆ ಬೇರೆ ಸಮಯದಲ್ಲಿ ಮಾತನಾಡೋಣ ಅವಕಾಶ ಸಿಗುತ್ತದೆ, ಮುಖ್ಯಮಂತ್ರಿಗಳೇ ಭರವಸೆ ಕೊಟ್ಟ ಮೇಲೆ ಚರ್ಚೆ ಮಾಡಿ ಏನು ಮಾಡುತ್ತೀರಿ? ದಯವಿಟ್ಟು ಸಹಕರಿಸಿ.

11. ಶೃಂಗೇರಿ ಕ್ಷೇತ್ರದಲ್ಲಿ ನಕ್ಸಲೀಯರ ಚಟುವಟಿಕೆ ಕುರಿತು

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ಶೃಂಗೇರಿ ಒಂದು ರಾಷ್ಟ್ರ ಪ್ರಸಿದ್ಧಿ ಕ್ಷೇತ್ರ ಶೃಂಗೇರಿಯಂಥ ಕ್ಷೇತ್ರದಲ್ಲಿ ಈ ನಕ್ಸಲೀಯರ ಚಟುವಟಿಕೆ ಇದೆ ಎನ್ನುವುದು ಈಗ ದೇಶದ ತುಂಬಾ ಪ್ರಚಾರಕ್ಕೆ ಬಂದಿದೆ, ಇದು ನನಗೆ ಬಹಳ ದುಃಖ ಕೊಡುತ್ತಿದೆ. ಶೃಂಗೇರಿ ಎಂದರೆ ನಾವು ತಿಳಿದುಕೊಂಡಿರುವುದು ಶಾರಾದಾಂಬೆಯ ಕ್ಷೇತ್ರ. ಈಗ ಶೃಂಗೇರಿ ಎಂದ ತಕ್ಷಣ ನಕ್ಸಲ್ ಎಂದು ಚರ್ಚೆ ಬರುವುದಕ್ಕೆ ಪ್ರಾರಂಭವಾಗಿದೆ; ಇದು ನನಗೆ ದುಃಖ ಕೊಡುತ್ತಿದೆ. ಶೃಂಗೇರಿಯಲ್ಲಿರುವ ಯಾವುದೇ ಮೂಲನಿವಾಸಿಗಳು ನಕ್ಸಲೇಟ್ಸ್ ಆಗಿಲ್ಲ, ಅಲ್ಲಿರುವಂತಹ ಯಾವುದೇ ಗಿರಿಜನರು ನಕ್ಸಲೀಯರಲ್ಲ, ಅಲ್ಲಿರುವ ರೈತರು ನಕ್ಸಲೀಯರಲ್ಲ. ಅಲ್ಲಿರುವ ಗಿರಿಜನರಿಗೆ, ರೈತರಿಗೆ ಪ್ಯಾಕೇಜ್ ಕೊಡುತ್ತೇವೆಂದು ಸರ್ಕಾರ 60 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿತ್ತು, ಈವರೆವಿಗೂ ಆ ಹಣ ಬಿಡುಗಡೆಯಾಗಿಲ್ಲ, ಆ ಗಿರಿಜನರ ಮನೆ ಮುಂದುಗಡೆ ರೈತರ ಮನೆಯ ಮುಂದುಗಡೆ ಸರ್ಕಾರ ಒಂದೊಂದು ಫಲಕವನ್ನು ನೆಟ್ಟಿದೆ. "ನೀವು ಇಲ್ಲಿ ವಾಸ ಮಾಡುವುದಾದರೆ ಮಾಡಬಹುದು, ಹೊರಗೆ ಹೋಗುವುದಾದರೆ ಹೋಗಬಹುದು" ಎಂದು ಅಲ್ಲಿರುವ ಶಾಲೆಗಳಿಗೆ ಅಧ್ಯಾಪಕರನ್ನು ಹಾಕುತ್ತಿಲ್ಲ, ರಸ್ತೆ, ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ, ಅರಣ್ಯ ಇಲಾಖೆಯವರು ಅವಕಾಶ ಮಾಡಿಕೊಡುತ್ತಿಲ್ಲ, ಜೊತೆಗೆ ಆ ರೈತರು ಗಿರಿಜನರಿಗೆ ಹಕ್ಕುಪತ್ರವನ್ನು ಕೊಟ್ಟರೆ, ಈ ನಕ್ಸಲ್ ಎನ್ನುವ ಸಮಸ್ಯೆ ಬಗೆಹರಿದು ಹೋಗುತ್ತದೆ. ಮೊದಲು ಸರ್ಕಾರ ಮಾಡಬೇಕಾದ ಆದ್ಯತೆಯ ಕೆಲಸ, ಆ ಭಾಗದಲ್ಲಿ ವಾಸ ಮಾಡುವ ಜನರಿಗೆ ಕಾಯಂ ಸಾಗುವಳಿ ಚೀಟಿಯನ್ನು ಕೊಡುವ ವ್ಯವಸ್ಥೆಯಾಗಬೇಕು, ಅಲ್ಲಿರುವ ಯಾವುದೇ ರೈತರು, ಗಿರಿಜನರು ನಕ್ಸಲ್ ಅಲ್ಲ, ಆ ನಕ್ಸಲ್ ಎನ್ನುವ ಪದವನ್ನು ಉಪಯೋಗಿಸಿಕೊಂಡು, ಪ್ರಗತಿಪರ ಹೆಸರಿನಲ್ಲಿ ಮಾಡುತ್ತಿರುವ ಚಟುವಟಿಕೆ ಶೃಂಗೇರಿಗೆ ಕರಾಳಛಾಯೆ ಬರುವಂತಹ, ಕೆಟ್ಟಹೆಸರು ಬರುವಂತಹ ವ್ಯವಸ್ಥೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಅವರೊಡನೆ ಮಾತುಕತೆ ಮಾಡುತ್ತೇವೆಂದು ಹೇಳಿದ್ದಾರೆ, ಆ ಮಾತುಕತೆ ಮಾಡಬೇಕಾದರೆ ಆ ಭಾಗದಲ್ಲಿರುವಂತಹ, ಕುದುರೆ ಮುಖ ರಾಷ್ಟ್ರೀಯ ಉದ್ಯಾನವನದ ಸುತ್ತ ಇರುವಂತಹ ಶಾಸಕರನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು, ಆ ಐದು ಜನ ಶಾಸಕರನ್ನು ಗಣನೆಗೆ ತೆಗೆದುಕೊಂಡು ಮಾತುಕತೆ ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ. ಜೊತೆಗೆ ಅಲ್ಲಿಯ ಪೊಲೀಸ್ ವ್ಯವಸ್ಥೆ ಇನ್ನೂ ಬಂದೋಬಸ್ತ್